# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1181 |
| ಉತ್ತರಿಸಬೇಕಾದ ದಿನಾಂಕ | : 18.03.2025 |
| ಉತ್ತರಿಸಬೇಕಾದ ಸಚಿವರು | : ಸಹಕಾರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ವಿಜಯನಗರ ಕ್ಲಬ್ ರಸ್ತೆಯಲ್ಲಿರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ.14, ರಜತ ಭವನ, ವಿಜಯನಗರ ಇಲ್ಲಿರುವ ಬ್ಯಾಂಕ್‌ನ ಆಡಳಿತ ಮಂಡಳಿ ಮತ್ತು ಸಿ.ಇ.ಓ ರವರು ಶಾಮೀಲಾಗಿ ಬ್ಯಾಂಕ್ ನಲ್ಲಿಟ್ಟಿರುವ ಠೇವಣಿ ಹಣವನ್ನು ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br><br>ಬೆಂಗಳೂರು ವಿಜಯನಗರ ಕ್ಲಬ್ ರಸ್ತೆಯಲ್ಲಿರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಈ ಬ್ಯಾಂಕಿನಲ್ಲಿ ಮೂರನೇ ವ್ಯಕ್ತಿಯ ಠೇವಣಿ ಆಧಾರದ ಮೇಲೆ ಸಾಲ ನೀಡಿರುವುದರ ಬಗ್ಗೆ ದಿನಾಂಕ:04-01-2025 ರಂದು ದೂರು ಅರ್ಜಿ ಸ್ವೀಕೃತವಾಗಿದ್ದು, ದೂರು ಅರ್ಜಿಯನ್ನು ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಪ್ರಾಥಮಿಕ ತನಿಖೆಗಾಗಿ ದಿನಾಂಕ:03-02-2025 ರಂದು ವರ್ಗಾಯಿಸಲಾಗಿದೆ. |
| ಆ | ಇಲ್ಲಿನ ಸಿಬ್ಬಂದಿಗಳು ಮತ್ತು ಆಡಳಿತ ಮಂಡಳಿಯವರು ಸೇರಿ ಕೋಟ್ಯಂತರ ಹಣವನ್ನು ಠೇವಣಿ ಇಟ್ಟಿರುವವರ ಗಮನಕ್ಕೆ ಬಾರದಂತೆ ಬೇರೆಯವರಿಗೆ ಆ ಬಾಂಡ್‌ಗಳನ್ನು ಶ್ಯೂರಿಟಿಗೆ ಬಳಸಿಕೊಂಡು ಸಾಲವನ್ನು ನೀಡುತ್ತ ಬ್ಯಾಂಕ್‌ಗೆ ಮೋಸ ಮಾಡುತ್ತ ಬರುತ್ತಿದ್ದು ಇದರ ಬಗ್ಗೆ ಸರ್ಕಾರವು ತನಿಖೆ ನಡೆಸಿ ಸೂಕ್ತ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರದ ನಿರ್ಧಾರಗಳೇನು; (ಮಾಹಿತಿ ಒದಗಿಸುವುದು) | ಶ್ರೀಮತಿ ಲಿಂಗಮ್ಮ, ಶ್ರೀ ಎಲ್. ರಾಮಕೃಷ್ಣಪ್ಪ, ಶ್ರೀ ರಾಘವೇಂದ್ರರಾವ್ ಕೆ. ಹೆಚ್. ಹಾಗೂ ಶ್ರೀಮತಿ ನಾಗೇಶ್ವರಿ ರವರುಗಳ ಹೆಸರಿನಲ್ಲಿ ದೂರು ಬಂದ ಹಿನ್ನಲೆಯಲ್ಲಿ ವಿಚಾರಣೆಗೆ ದಾಖಲಾತಿಗಳನ್ನು ಹಾಜರುಪಡಿಸಲು ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರಿಂದ ದಿನಾಂಕ:11-03-2025 ರಂದು ನೋಟೀಸ್ ಜಾರಿ ಮಾಡಲಾಗಿದೆ. ಪ್ರಸ್ತುತ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. |
| ಇ | ಬೆಂಗಳೂರು ವಿಜಯನಗರ ಕ್ಲಬ್ ರಸ್ತೆಯಲ್ಲಿರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ.14, ರಜತ ಭವನ, ವಿಜಯನಗರ ಇದರ ಬಗ್ಗೆ ಸಹಕಾರ ಇಲಾಖೆಗೆ ಯಾವುದಾದರೂ ದೂರುಗಳು ಬಂದಿವೆಯೇ; ಇದ್ದಲ್ಲಿ ಅದರ ಮೇಲೆ ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಹೌದು, ದೂರು ಬಂದಿದೆ.<br><br>ಶ್ರೀಮತಿ ಲಲಿತಾ ಎಸ್ ರವರ ಮಗ ಶ್ರೀ ಹೆಚ್.ಎಲ್.ಹರೀಶ್ ಎಂಬುವವರು ದಿನಾಂಕ:04-01-2025ರಂದು ನೀಡಿರುವ ದೂರು ಅರ್ಜಿಯನ್ನು ವಿಚಾರಣೆ ನಡೆಸಲು ದಿನಾಂಕ:03.02.2025 ರಂದು ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರಿಗೆ ವರ್ಗಾಯಿಸಿದೆ, ಸದರಿಯವರಿಂದ ಬ್ಯಾಂಕಿಗೆ ವಿಚಾರಣಾ ನೋಟೀಸ್ ಜಾರಿಮಾಡಲಾಗಿದೆ. ಪ್ರಸ್ತುತ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. |

| | | |
|---|---|---|
| ಈ | ಈ ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕರ ಮೇಲೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ಬ್ಯಾಂಕಿನ ಹಣ ದುರುಪಯೋಗ ಕುರಿತು ದೂರು ದಾಖಲಾಗಿದ್ದು, ಆದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದು ಇದರ ಬಗ್ಗೆ ಸರ್ಕಾರದ ಕ್ರಮಗಳೇನು? (ಮಾಹಿತಿ ಒದಗಿಸುವುದು) | 2019-20ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬ್ಯಾಂಕಿನ ಅಧ್ಯಕ್ಷರು / ವ್ಯವಸ್ಥಾಪಕರ ವಿರುದ್ಧ ಮೂರನೇ ವ್ಯಕ್ತಿಯ ಠೇವಣಿ ಆಧಾರದ ಮೇಲೆ ಸಾಲ ನೀಡಿರುವ ಬಗ್ಗೆ ದಿನಾಂಕ:01.09.2023 ರಂದು ವಿಜಯನಗರ ಪೊಲೀಸ್ ಠಾಣೆಯಲ್ಲಿ ಬ್ಯಾಂಕಿನ ಅಧ್ಯಕ್ಷರು, ಮ್ಯಾನೇಜರ್ ಹಾಗೂ ಇತರರ ವಿರುದ್ಧ ಶ್ರೀಮತಿ ನಾಗೇಶ್ವರಿರವರು ನೀಡಿರುವ ದೂರಿನ ಮೇಲೆ ಎಫ್.ಐ.ಆರ್. ದಾಖಲಾಗಿದೆ (ಎಫ್.ಐ.ಆರ್. ಸಂಖ್ಯೆ: 0156/2023). ಈ ಬಗ್ಗೆಯು ಸಹ ಠೇವಣಿದಾರರ ಸಂಪೂರ್ಣ ಮಾಹಿತಿ ನೀಡಲು ಸೂಚಿಸಲಾಗಿರುತ್ತದೆ, ಪ್ರಸ್ತುತ ಪ್ರಕರಣವು ವಿಚಾರಣಾ ಹಂತದಲ್ಲಿದೆ, ಮೇಲಿನ ದೂರು ಅರ್ಜಿಗಳು ಹಾಗೂ ಇತರೆ ದೂರುಗಳ ಬಗ್ಗೆ ಪರಿಶೀಲಿಸಿ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಲ್ಲಿ ಪರಿವೀಕ್ಷಣೆ ಮಾಡಲು ಕ್ರಮವಿಡಲಾಗುವುದು. |

**ಕಡತ ಸಂಖ್ಯೆ: ಸಿಒ 53 ಸಿಸಿಬಿ 2025**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**